> ಜಯದೇವನ ಅಮ್ಮ ಹಳ್ಳಿಯಿಂದ ಬಂದು ಸಿಟಿಗೆ ಹೊಂದಿಕೊಳ್ಳದ ಎಡಬಿಡಂಗಿ ಹೆಂಗಸಿನ ಥರ ಇರಬಹುದೇನೊ ಅಂತ ಊಹೆ ಮಾಡಿದ್ದ ತನ್ಮಯಿಗೆ ಅವರನ್ನು ನೋಡಿ ಆಶ್ಚರ್ಯವಾಯಿತು.

ಓದ್ತಿದ್ದಾನಂತೆ. ಪ್ರತಿ ಸೆಕೆಂಡೂ ನಂಗೆ ಅಮೂಲ್ಯ ಅಂತ ಕೆಲಸಕ್ಕೆ ಬಂದ ದಿನ ಹೇಳಿದ್ದ. ಎರಡು ದಿನಕ್ಕೊಮ್ಮೆ ಅರವಿಂದನಿಗೆ ಶೇವ್ ಮಾಡ್ತಾನೆ. ತಿಂಗಳಿಗೊಮ್ಮೆ ಹೇರ್‌ಕಟ್ ಮಾಡ್ತಾನೆ. ಉಗುರೂ ಕತ್ತರಿಸ್ತಾನೆ. ಅವನ ಜತೆ ಚೆಸ್ ಆಡ್ತಾನೆ. ಅರವಿಂದ ನಿದ್ದೆ ಮಾಡುವಾಗ ಕೂತು ಓದ್ತಾನೆ. ಅವನ ಓದಿನ ದಾಹದ ಬಗ್ಗೆ ತನ್ಮಯಿಗೆ ಕುತೂಹಲ ಮತ್ತು ಮೆಚ್ಚುಗೆ. ಮುಂದೊಂದು ದಿನ ಅವನು ದೊಡ್ಡ ಆಫೀಸರ್ ಆಗಬಹುದು. ಆಗದಿದ್ದರೂ ಒಳ್ಳೆಯ ಮನುಷ್ಯನಂತೂ ಆಗ್ತಾನೆ ಅನ್ನಿಸಿದೆ.

'ಕ್ಯಾಂಪಸ್ಸಿಂದ ಲ್ಯಾಬ್‌ಗೆ ಹೋಗಿ ರಿಪೋರ್ಟ್ ತರ್ತೀನಿ. ಇವತ್ತು ಲಿಟರರಿ ಫೆಸ್ಟ್ ಇದೆ. ಕ್ಲಾಸಿರಲ್ಲ, ಬೇಗ ಬರ್ತೀನಿ. ಸಂಜೆ ಡಾಕ್ಟರ್ ಹತ್ತಿರ ಹೋಗಬೇಕು...' ಅಂತ ಗಂಡನ ಕಡೆ ನೋಡುತ್ತ ಹೇಳಿಹೋದಳು.

ಸ್ಟಾಫ್ ರೂಮಿನಲ್ಲಿ ಯಾರೂ ಇರಲಿಲ್ಲ. ಸ್ವಲ್ಪ ಹೊತ್ತು ಅಲ್ಲೇ ಕೂತಳು. ರಾತ್ರಿ ಬಿದ್ದ ಕನಸು ನೆನಪಾಯಿತು. ಅರವಿಂದನಿಗೆ ಏನಾದರೂ ಆಗಬಹುದು ಅನ್ನೋದರ ಮುನ್ಸೂಚನೆಯೇ ಈ ಕನಸು? ಯಾರೊಂದಿಗಾದರೂ ಹೇಳಿಕೊಂಡರೆ ಕನಸು ದುರ್ಬಲವಾಗುತ್ತೆ ಅಂತ ಅಮ್ಮ ಹೇಳುತ್ತಿದ್ದುದು ತನ್ಮಯಿಗೆ ನೆನಪಾಯಿತು. ಆದರೆ, ಯಾರಿಗೆ ಹೇಳುವುದು? ವೈಯಕ್ತಿಕ ವಿಷಯಗಳನ್ನು ಹೇಳಿಕೊಳ್ಳುವಂತಹ ಲೇಡಿ ಕಲೀಗ್ಸ್‌ಗಳು ಯಾರೂ ಇಲ್ಲ. ಒಂದು ವೇಳೆ ಹೇಳಲು ಹೋದರೆ ಅವರೇ ತಮ್ಮ ಸ್ವಂತದ ಗೋಳುಗಳನ್ನು ಹೇಳಲು ಶುರುಮಾಡಿ ಮಾತುಗಳನ್ನು ಮಹಿಳಾ ಸಮಾಜದ ಹರಟೆ ಮಟ್ಟಕ್ಕೆ ಇಳಿಸುತ್ತಾರೆ. ಇನ್ನು ಗಂಡಸರಿಗೆ ಹೇಳುವುದೆಂದರೆ ಹೊಸ ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಂಡಂತೆ.

'ಫಂಕ್ಷನ್ ಶುರುವಾಗುತ್ತೆ ಬನ್ನಿ ಮೇಡಂ, ಪ್ರೊಫೆಸರ್ ಕರೀತಿದ್ದಾರೆ...' ಅಂತ ಜಯದೇವ ಬಂದು ಹೇಳಿ ಹೋದ. ಪ್ರೊಫೆಸರ್ ಕರೆದಿರಲ್ಲ ಅಂತ ಅವಳಿಗೂ ಗೊತ್ತು. ಇತ್ತೀಚೆಗಂತೂ ತನ್ಮಯಿಗೆ ಯಾವುದರಲ್ಲೂ ಆಸಕ್ತಿ ಇಲ್ಲ. ಊಹಿಸಲಾಗದ್ದೇನೊ ಆಗಿಬಿಡುತ್ತೆ ಅನ್ನೋ ಭಯ. ಕೆಟ್ಟದನ್ನು ಮೊದಲೇ ಊಹಿಸಿ ಎಚ್ಚರವಹಿಸಿದರೆ ಸಮಸ್ಯೆಗಳು ಕಡಿಮೆ ಅನ್ನುವ ಮನಃಸ್ಥಿತಿ ಅವಳದ್ದು. ಉಳಿದವರಿಗಿಂತ ತಾನು ಎಲ್ಲ ವಿಷಯಗಳಲ್ಲೂ ಭಿನ್ನ ಅನ್ನುವ ಧೋರಣೆ. ಎಂ.ಎ. ಪ್ರೀವಿಯಸ್‌ನಲ್ಲಿ ಇರುವಾಗಲೇ ಅವಳದೊಂದು ಪೊಯೆಟ್ರಿ ಕಲೆಕ್ಷನ್ ಬಂದಿತ್ತು. ಆಮೇಲೆ ಕಥೆ ಬರೆಯಲು ಆರಂಭಿಸಿದಳು. ಕಥೆ, ಕವಿತೆಗಳಲ್ಲಿ ಅನೂಹ್ಯ ಬದುಕು, ಸಂಬಂಧಗಳು ಸೃಷ್ಟಿಸುವ ತಲ್ಲಣಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಿದ್ದಳು. ಸಾಮಾನ್ಯ ಓದುಗರಿಗೆ ಅರ್ಥವಾಗದೆ ಅವು ಅಧ್ಯಾತ್ಮದ ಪರಿಭಾಷೆಯಲ್ಲಿವೆ ಅನ್ನಿಸುವ ಭ್ರಮೆ ಹುಟ್ಟಿಸುತ್ತಿದ್ದವು. ಉಳಿದೆಲ್ಲ ಕವಿ, ಕಥೆಗಾರರಿಗಿಂತ ತಾನು ಡಿಫರೆಂಟ್ ಅನ್ನೋ ಭಾವನೆ... ಅವಳ ಓದುಗರ ಬಳಗವೂ ದೊಡ್ಡದಿತ್ತು. ಓದಿದ್ದು ಇಂಗ್ಲಿಷ್ ಸಾಹಿತ್ಯವಾದರೂ ಬರೆಯೋದು ಕನ್ನಡದಲ್ಲೇ. ಅವಳ ಪದ್ಯ, ಕಥೆಗಳು ಪತ್ರಿಕೆಗಳಲ್ಲಿ ಪ್ರಕಟವಾದಾಗ ಓದಿ ಅಂತ ಅವಳು ಯಾರಿಗೂ ಹೇಳುವುದಿಲ್ಲ. ಚೆನ್ನಾಗಿದೆ ಅಂತಲೋ, ಕವಿತೆ ಅರ್ಥವಾಗಲಿಲ್ಲ